

ಆದರೆ ಈ ವರ್ಗದಲ್ಲಿ ಪೈಪೋಟಿ ಹೆಚ್ಚಿಸಿದ್ದು ಹ್ಯೂಸಂಗ್ ಅಕ್ವಿಲಾ ಜಿವಿ 250. ಸುಮಾರು ₹ 3.4 ಲಕ್ಷಕ್ಕೆ ಲಭ್ಯವಿರುವ ಅಕ್ವಿಲಾ ಈ ವರ್ಗದಲ್ಲೇ ಅತ್ಯಂತ ಶಕ್ತಿಶಾಲಿ ಲ್ರೂಸರ್ ಎನಿಸಿದೆ. ಆದರೆ ಭಾರಿ ತೂಕದ ಕಾರಣ (180 ಕೆ.ಜಿ) ಅದರ ಗರಿಷ್ಠ ವೇಗ ಕೇವಲ 130 ಕಿ.ಮೀ. ಆದರೆ 0–100 ಕಿ.ಮೀ/ಗಂಟೆ ವೇಗವನ್ನು ಕೇವಲ 11 ಸೆಕೆಂಡ್‌ಗಳಲ್ಲಿ ಮುಟ್ಟುವಷ್ಟು ಅಕ್ವಿಲಾ ಶಕ್ತಿಯುತವಾಗಿದೆ. ಬೆಲೆ ತುಸು ಹೆಚ್ಚೇ ಅನಿಸಿದರೂ, ದೊಡ್ಡ ಕ್ರೂಸರ್‌ಗಳ ಸವಾರಿಯ ಅನುಭವವನ್ನು ಅಕ್ವಿಲಾ ನೀಡುತ್ತದೆ.

ಇದೆಲ್ಲಕ್ಕಿಂತ ಮಾರುಕಟ್ಟೆಗೆ ರಂಗೇರಿರುವುದು ಅಮೆರಿಕದ ಮಿಯಾಮಿಯ ಬೈಕ್ ಕಂಪೆನಿ 'ಯುಎಂ' ಮೋಟರ್ಸ್ ಕಣಕ್ಕೆ ಇಳಿದ ನಂತರ. ಯುಎಂ ಬತ್ತಳಿಕೆಯಲ್ಲಿ ಪೂರ್ಣ ಪ್ರಮಾಣದ ಕ್ರೂಸರ್‌ಗಳು, ಆಫ್‌ರೋಡರ್‌ಗಳು, ಕ್ರಾಸ್‌ಓವರ್‌ಗಳು ಇವೆ. ಆದರೆ ಕಂಪೆನಿ ಕೇವಲ ಕ್ರೂಸರ್‌ಗಳನ್ನು ನಮ್ಮ ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

ಯುಎಂನ ಕಮಾಂಡೊ ಮತ್ತು ರಿನೇಜಡ್ ಕಮಾಂಡೊಗಳು ನೋಟದಲ್ಲಿ ಹಾರ್ಲೆ ಡೇವಿಡ್‌ಸನ್ ಕ್ರೂಸರ್‌ಗಳಿಗೂ ಪೈಪೋಟಿ ನೀಡುತ್ತವೆ. ಜತೆಗೆ, ಈ ವರ್ಗದಲ್ಲೇ ಅತ್ಯುತ್ತಮ ಸವಾರಿಯ ಅನುಭವ ನೀಡುವ ಕ್ರೂಸರ್. ಭಾರತಕ್ಕೆ ಪ್ರವೇಶಿಸಲು ಕಂಪೆನಿ 2014ರಿಂದ ಪ್ರಯತ್ನಿಸುತ್ತಿದ್ದರೂ, ಆರೇಳು ತಿಂಗಳ ಹಿಂದಷ್ಟೇ ಈ ಎರಡೂ ಬೈಕ್‌ಗಳನ್ನು ನಮ್ಮ ಮಾರುಕಟ್ಟೆಗೆ ಬಿಡುಗಡೆ ಆಗಿವೆ.

280 ಸಿ.ಸಿ ಎಂಜಿನ್ ಸಾಮರ್ಥ್ಯವಿರುವ ಈ ಬೈಕ್‌ಗಳು ಆ ವರ್ಗದಲ್ಲೇ ಅತ್ಯಂತ ಶಕ್ತಿಯುತ ಬೈಕ್‌ಗಳಾಗಿವೆ. ದೇಶದಲ್ಲಿ ಕೇವಲ 11 ಡೀಲರ್‌ಗಳನ್ನು ಹೊಂದಿರುವ ಯುಎಂ ಮೋಟರ್ಸ್‌ನ ಜಾಲ ಇನ್ನೂ ವಿಸ್ತರಿಸಬೇಕಿದೆ. ಆದರೆ ಈ ಬೈಕ್‌ಗಳ ಹೆಗ್ಗಳಿಕೆ ಇರುವುದು ಅವುಗಳ ನೋಟ ಮತ್ತು ಬೆಲೆಯಲ್ಲಿ. ಕಮಾಂಡೊ ಎಸ್ ಮತ್ತು ಕಮಾಂಡೊ ಕ್ಲಾಸಿಕ್‌ನ ಬೆಲೆ ₹ 1.9 ಲಕ್ಷದಷ್ಟಿದೆ.

ಏಳೆಂಟು ವರ್ಷಗಳ ಹಿಂದೆ 250–300 ಸಿ.ಸಿ ಎಂಜಿನ್ ಸಾಮರ್ಥ್ಯದ ಬೈಕ್‌ಗಳೆಂದರೆ ಎಲ್ಲರೂ ಹುಬ್ಬೇರಿಸಿ ನೋಡುತ್ತಿದ್ದರು. ರಸ್ತೆಯಲ್ಲಿ 250 ಸಿ.ಸಿ ಬೈಕ್ ಬಂತೆಂದರೆ ಕಣ್ಣರಳಿಸಿ ಅಬ್ಬಾ.. ಎನ್ನುತ್ತಿದ್ದರು. ಹತ್ತಾರು ಲಕ್ಷ ರೂಪಾಯಿ ಬೆಲೆ ಬಾಳುತ್ತಿದ್ದ ಸೂಪರ್ ಬೈಕ್‌ಗಳಂತೂ ಕಣ್ಣಿಗೆ ಹಬ್ಬ. ಆದರೆ ಇಂದಿನ ಪರಿಸ್ಥಿತಿ ಹಾಗಿಲ್ಲ. 300– 400 ಇರಲಿ 1,000 ಸಿ.ಸಿ ಎಂಜಿನ್ ಸಾಮರ್ಥ್ಯದ ಸೂಪರ್ ಬೈಕ್‌ಗಳೂ ಈಗ ನಗರ ಪ್ರದೇಶಗಳಲ್ಲಿ ಸಾಮಾನ್ಯ ಎಂಬಂತಾಗಿದೆ. ಸೂಪರ್ ಬೈಕ್ ರೂಪದಲ್ಲಿ ಲಕ್ಷುರಿಯೇ ಧರೆಗಿಳಿದಿದೆ.

ಸ್ಪೋರ್ಟ್ಸ್– ಕ್ರೂಸರ್ ಬೈಕ್‌ಗಳಿಗೂ ಸಾಮಾನ್ಯ ಬೈಕ್‌ಗಳಿಗೂ ಎಂಜಿನ್ ಸಾಮರ್ಥ್ಯದಲ್ಲಷ್ಟೇ ವ್ಯತ್ಯಾಸ ಇರುವುದಿಲ್ಲ. ಬದಲಿಗೆ ಛಾಸಿಸ್‌ನಿಂದ ಆರಂಭವಾಗಿ ಪ್ರತಿಯೊಂದು ಬಿಡಿಭಾಗವೂ ವಿಶಿಷ್ಟವಾಗಿರುತ್ತವೆ. ಈ ಕಾರಣಕ್ಕೇ ಕಡಿಮೆ ಎಂಜಿನ್ ಸಾಮರ್ಥ್ಯದ ಸ್ಪೋರ್ಟ್ಸ್ ಬೈಕ್‌ಗಳ ಬೆಲೆ ಅಷ್ಟೇ ಎಂಜಿನ್ ಸಾಮರ್ಥ್ಯದ ಸಾಮಾನ್ಯ ಬೈಕ್‌ಗಳಿಗಿಂತ ತೀರಾ ದುಬಾರಿಯಾಗಿ ಇರುತ್ತಿತ್ತು. ಆದರೆ ಈಗ ಅವು ತೀರಾ ದುಬಾರಿ ಏನಲ್ಲ, ಕೈಗೆಟುಕುವಷ್ಟು ಎತ್ತರದಲ್ಲಿಯೇ ಇವೆ.

ಇದಕ್ಕೆಲ್ಲಾ ನಾಂದಿ ಹಾಡಿದ್ದು, ಯಮಾಹ. ಸುಮಾರು ಹತ್ತು ವರ್ಷಗಳ ಹಿಂದೆ ಯಮಾಹಾ ವೈಝೆಡ್‌ಎಫ್ ಆರ್15 ಎಂಬ ಸ್ಪೋರ್ಟ್ಸ್ ಬೈಕ್ ಅನ್ನು ಭಾರತದ ಮಾರುಕಟ್ಟೆಗೆ ಆ ಕಂಪೆನಿ ಬಿಡುಗಡೆ ಮಾಡಿತು. ಆಗ ಭಾರತದ ಮಾರುಕಟ್ಟೆಯಲ್ಲಿದ್ದ ಸುಮಾರು 26 ಲಕ್ಷ ರೂಪಾಯಿ ಮೌಲ್ಯದ ಯಮಾಹಾ ವೈಝೆಡ್‌ಎಫ್ ಆರ್1 (996 ಸಿ.ಸಿ) ಬೈಕ್‌ನ ಮಿನಿಯೇಚರ್‌ನಂತೆ ಇದ್ದ ಆರ್15ನಲ್ಲಿ ಇದ್ದದ್ದು, ಕೇವಲ 150 ಸಿ.ಸಿ ಸಾಮರ್ಥ್ಯದ ಎಂಜಿನ್.

ಆದರೆ ಆ ಎಂಜಿನ್‌ಗೆ ಇಂಧನ ಊಡುತ್ತಿದ್ದದ್ದು, ಕಾರ್ಬೊರೇಟರ್ ಅಲ್ಲ. ಬದಲಿಗೆ ಕಂಪ್ಯೂಟರ್ ನಿಯಂತ್ರಿತ ಫ್ಯುಯೆಲ್ ಇಂಜೆಕ್ಷನ್. ನಮ್ಮ ದೇಶದಲ್ಲಿ ಮಾರಾಟವಾಗುವ ಹತ್ತಾರು

